


ಬರೀ ಪ್ರಚಾರಕ್ಕಾಗಿ..

## 2ನೇ ವಿಧಾನಸಭೆಯ ದಾಖಲೆ

ರಾಜ್ಯ ರಾಜಕೀಯದ ಶಕ್ತಿಕೇಂದ್ರವಾಗಿರುವ ಬೆಂಗಳೂರಿನಲ್ಲಿಯೂ ವಿಧಾನಸಭಾ ಚುನಾವಣೆಯಲ್ಲಿ ಮಹಿಳೆಯರು ಟಿಕೆಟ್ ಪಡೆಯುವುದು ಕಷ್ಟ. ಗೆಲ್ಲುವುದು ಇನ್ನೂ ಕಷ್ಟ. 1957ರಿಂದ 1962ರ ಮಾರ್ಚ್‌ವರೆಗೆ ಅಸ್ತಿತ್ವದಲ್ಲಿದ್ದ ಎರಡನೇ ವಿಧಾನಸಭೆಯಲ್ಲಿ ಬೆಂಗಳೂರಿನಿಂದ ಒಟ್ಟು 10 ಕ್ಷೇತ್ರಗಳಲ್ಲಿ ಮೂವರು ಮಹಿಳೆಯರು ಚುನಾವಣೆ ಗೆದ್ದು ಆಯ್ಕೆ ಆದದ್ದು ದೊಡ್ಡ ದಾಖಲೆ. (ಆಗ 10 ಕ್ಷೇತ್ರಗಳಿದ್ದು 2 ಕ್ಷೇತ್ರಗಳಲ್ಲಿ ದ್ವಿಸದಸ್ಯತ್ವ ಇತ್ತು.) ಚಾಮರಾಜಪೇಟೆಯಿಂದ ಲಕ್ಷ್ಮಿದೇವಿ ರಾಮಣ್ಣ, ಗಾಂಧಿನಗರದಿಂದ ನಾಗರತ್ನಮ್ಮ ಮತ್ತು ಹಲಸೂರು ಕ್ಷೇತ್ರದಿಂದ ಗ್ರೇಸ್ ಟಕರ್ ಅವರು ಆಗ ಜಯ ಗಳಿಸಿದ್ದರು.

ಮಂದಿ ಈವರೆಗೆ ಸ್ಪೀಕರ್ ಹುದ್ದೆಯನ್ನು ಅಲಂಕರಿಸಿದ್ದು ಕಾಂಗ್ರೆಸ್‌ನ ಕೆ.ಎಸ್.ನಾಗರತ್ನಮ್ಮ ಅವರು ಒಮ್ಮೆ ಸ್ಪೀಕರ್ ಆಗಿದ್ದು ಬಿಟ್ಟರೆ ಇನ್ನೊಬ್ಬ ಮಹಿಳೆಯನ್ನು ಆ ಘನತೆವೆತ್ತ ಹುದ್ದೆಯಲ್ಲಿ ಕೂರಿಸಲು ಯಾವ ಪಕ್ಷವೂ ಮನಸ್ಸು ಮಾಡಿಲ್ಲ. (ಇನ್ನೊಬ್ಬ ಪ್ರಭಾವಶಾಲಿ ಮಹಿಳೆ ನಾಗಮ್ಮ ಕೇಶವಮೂರ್ತಿಯವರು ಡೆಪ್ಯುಟಿ ಸ್ಪೀಕರ್ ಆಗಲಷ್ಟೇ ಸಾಧ್ಯವಾಯಿತು.) ವಿಧಾನ ಪರಿಷತ್ತಿನ ಸಭಾಪತಿ ಹುದ್ದೆಯೂ ಮಹಿಳೆಯರಿಗೆ ದೂರವೇ.

ಮುಖ್ಯಮಂತ್ರಿ ಹೋಗಲಿ, ವಿಧಾನಸಭೆಯ ಪ್ರತಿಪಕ್ಷದ ನಾಯಕ ಹುದ್ದೆಯೂ ಅತ್ಯಂತ ಮಹತ್ವದ್ದು. ಆ ಹುದ್ದೆಯನ್ನೂ ಇದುವರೆಗೆ ಮಹಿಳೆಯೊಬ್ಬರು ವಹಿಸಿಕೊಳ್ಳಲು ಅವಕಾಶ ಸಿಕ್ಕಿಲ್ಲ. ವಿಧಾನ ಪರಿಷತ್ತಿನಲ್ಲಿ ಪ್ರತಿಪಕ್ಷ ನಾಯಕಿಯ ಹುದ್ದೆಯನ್ನು ಕಾಂಗ್ರೆಸ್‌ನ ಮೋಟಮ್ಮ ಅವರು ವಹಿಸಿದ್ದು ಇತ್ತೀಚಿನ ಒಂದು ಅಪವಾದ ಎನ್ನಬಹುದು.

ರಾಜಕೀಯ ಪಕ್ಷಗಳ ಟಿಕೆಟ್ ಆಯ್ಕೆ ಪ್ರಕ್ರಿಯೆಯಲ್ಲಿ ಹೈಕಮಾಂಡ್‌ನ ನಿರ್ಧಾರ ಏನೇ ಇದ್ದರೂ, ರಾಜ್ಯ ಘಟಕಗಳ ಅಧ್ಯಕ್ಷರಿಗೆ ಹೆಚ್ಚು ಅಧಿಕಾರ ಇರುತ್ತದೆ. ವಿವಿಧ ಪಕ್ಷಗಳ ರಾಜ್ಯ ಅಧ್ಯಕ್ಷರ ಹುದ್ದೆ ಪಡೆಯಲು ದೊಡ್ಡ ಮಟ್ಟದ ಪೈಪೋಟಿಯೂ ಇರುತ್ತದೆ. ರಾಜ್ಯದಲ್ಲಿ ಈವರೆಗೆ ಕಾಂಗ್ರೆಸ್, ಬಿಜೆಪಿ, ಜನತಾ ದಳ, ಜನತಾಪಕ್ಷ, ಕೆಜೆಪಿ– ಹೀಗೆ ಯಾವ ಪಕ್ಷಗಳೂ ತಮ್ಮ ಅಧ್ಯಕ್ಷತೆಗೆ ಮಹಿಳೆಯೊಬ್ಬರನ್ನು ಪರಿಗಣಿಸಿಲ್ಲ.

ಕಳೆದ ಐದು ವರ್ಷಗಳ ಬಿಜೆಪಿ ಆಡಳಿತದಲ್ಲಂತೂ ಮಹಿಳೆಯರ ರಾಜಕೀಯ ಪ್ರಾತಿನಿಧ್ಯ ಇನ್ನಷ್ಟು ನೆಲ ಕಚ್ಚಿದೆ. ಬಿ.ಎಸ್.ಯಡಿಯೂರಪ್ಪ ಅವರ ಸಂಪುಟದಲ್ಲಿ ಇದ್ದವರು ಒಬ್ಬರೇ ಮಹಿಳಾ ಸಚಿವೆ. ಬಳಿಕ ಮುಖ್ಯಮಂತ್ರಿಗಳಾದ ಸದಾನಂದ ಗೌಡರು ಮತ್ತು ಜಗದೀಶ ಶೆಟ್ಟರ್ ಅವರ ಸಂಪುಟದಲ್ಲಿ ಒಬ್ಬ ಮಹಿಳೆಗೂ ಸಚಿವ ಸ್ಥಾನ ನೀಡಲಿಲ್ಲ!

ಇಲ್ಲೊಂದು ಪಟ್ಟಿ ಇದೆ. ರಾಜ್ಯ ವಿಧಾನಸಭೆಗೆ 1957ರಿಂದ 2008ರವರೆಗೆ ನಡೆದ ಚುನಾವಣೆಗಳಲ್ಲಿ ಗೆದ್ದು ಶಾಸಕಿಯರಾದ ಮಹಿಳೆಯರ ಸಂಖ್ಯೆಯನ್ನು ಇದು ಸೂಚಿಸುತ್ತದೆ:

| ವರ್ಷ | ಶಾಸಕಿಯರ ಸಂಖ್ಯೆ | ಕ್ಷೇತ್ರಗಳು |
|---|---|---|
| 1957 | 13 | 179 |
| 1962 | 18 | 208 |
| 1967 | 5 | 208 |
| 1972 | 5 | 216 |
| 1978 | 8 | 224 |
| 1983 | 2 | 224 |
| 1985 | 8 | 224 |
| 1989 | 10 | 224 |
| 1994 | 7 | 224 |
| 1999 | 6 | 224 |
| 2004 | 6 | 224 |
| 2008 | 6 | 224 |

ಈ ಪಟ್ಟಿಯನ್ನು ನೋಡಿದರೆ ರಾಜ್ಯದ ವಿಧಾನಸಭಾ ಚುನಾವಣೆಯಲ್ಲಿ ಮಹಿಳೆಯರ ಅತಂತ್ರ ಸ್ಥಿತಿಯ ಬಗ್ಗೆ ಅರಿವಾಗುತ್ತದೆ. ವಿಧಾನಸಭೆಯ ಇತಿಹಾಸದಲ್ಲೇ ಅತ್ಯಂತ ಹೆಚ್ಚು ಮಹಿಳೆಯರು ಎಂದರೆ 18 ಮಹಿಳೆಯರು 1962ರಲ್ಲಿ ಶಾಸಕಿಯರಾಗಿ ಆಯ್ಕೆಯಾಗಿದ್ದುದೇ ಒಂದು ವಿಶೇಷ! ಆ ಸಲದ ಚುನಾವಣೆಯಲ್ಲಿ 208 ಕ್ಷೇತ್ರಗಳಷ್ಟೇ ಇದ್ದು, ವಿವಿಧ ರಾಜಕೀಯ ಪಕ್ಷಗಳು ಒಟ್ಟು 34 ಮಹಿಳೆಯರನ್ನು ಸ್ಪರ್ಧಾಕಣಕ್ಕೆ ಇಳಿಸಿದ್ದವು. ಸ್ಪರ್ಧಿಸಿದವರಲ್ಲಿ ಅರ್ಧಕ್ಕೂ ಹೆಚ್ಚು ಮಂದಿ ಗೆದ್ದಿದ್ದರು!

ಅದಕ್ಕೂ ಮುನ್ನ 1957ರಲ್ಲಿ 179 ಮತಕ್ಷೇತ್ರಗಳಿದ್ದಾಗ 13 ಮಂದಿ ಮಹಿಳೆಯರು ಶಾಸಕಿಯರಾಗಿ ಆಯ್ಕೆ ಆಗಿದ್ದರು. ಅದೂ ದೊಡ್ಡ ಸಾಧನೆಯೇ. ಆದರೆ 1967ರ ಬಳಿಕ ಒಮ್ಮಿಂದೊಮ್ಮೆಲೆ ವಿಧಾನಸಭೆಯಲ್ಲಿ ಮಹಿಳೆಯರ ಪ್ರಾತಿನಿಧ್ಯ ಕುಸಿಯತೊಡಗಿತು. 1972ರಲ್ಲಂತೂ ಇದು ದಯನೀಯ ಸ್ಥಿತಿಯನ್ನು ಮುಟ್ಟಿತು. ಆ ಸಲದ ಚುನಾವಣೆಯಲ್ಲಿ ವಿವಿಧ ರಾಜಕೀಯ ಪಕ್ಷಗಳಿಂದ ಒಟ್ಟು 28 ಮಹಿಳೆಯರು ಸ್ಪರ್ಧಿಸಿದ್ದರೂ ಕೆ.ಎಸ್.ನಾಗರತ್ನಮ್ಮ ಮತ್ತು ಚಂದ್ರಪ್ರಭಾ ಅರಸ್ ಮಾತ್ರ ಗೆದ್ದರು!